ಸಂಪೂರ್ಣವಾಗಿ ಆಧರಿಸಿದೆ. ಅಷ್ಟು ಹಿಂದಿನ ಕಾಲದಲ್ಲಿಯೇ ಸ್ವಾಮೀಜಿ ಭಾರತೀಯ ಸಮಾಜದ ಪರಿವರ್ತನೆಯಲ್ಲಿ ಶಿಕ್ಷಣದ ಮಹತ್ವವನ್ನು ಚೆನ್ನಾಗಿ ಅರಿತಿದ್ದರು ಎನ್ನುವುದು ಸೋಜಿಗವನ್ನು ಉಂಟುಮಾಡುತ್ತದೆ. ಅವರು ಹೇಳುತ್ತಾರೆ, "ವಿದ್ಯೆ, ವಿದ್ಯೆ, ವಿದ್ಯೆಯೊಂದೇ. ಅನೇಕ ಐರೋಪ್ಯ ದೇಶಗಳಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಅತಿ ದೀನರಿಗೂ ಅಲ್ಲಿ ಲಭಿಸಿರುವ ಸೌಕರ್ಯ ಮತ್ತು ವಿದ್ಯೆ – ಇವುಗಳನ್ನು ಕಂಡಾಗ ನನ್ನ ದೇಶದ ಬಡಜನರ ಸ್ಥಿತಿಯು ನನಗೆ ನೆನಪಾಗಿ, ನಾನು ಕಂಬನಿಯನ್ನು ಸುರಿಸುತ್ತಿದ್ದೆ. ಈ ವ್ಯತ್ಯಾಸ ಹೇಗಾಯಿತು? ನನಗೆ ಸಿಕ್ಕಿದ ಉತ್ತರವೇ, ವಿದ್ಯೆ."

'ಶಿಕ್ಷಣ' ಎಂಬ ಒಂದು ಮಾಂತ್ರಿಕ ಪದದಿಂದ ಪರಿಹರಿಸ ಲಾಗದ ಯಾವ ಸಮಸ್ಯೆಯೂ ಇಲ್ಲ ಎಂದು ಸ್ವಾಮೀಜಿ ಭಾವಿಸಿದ್ದರು. ಆದರೆ ಇಲ್ಲಿ ಶಿಕ್ಷಣ ಎಂದರೆ, ಸ್ವಾಮೀಜಿಯವರ ಪ್ರಕಾರ, ಬರೀ ಪುಸ್ತಕ ಪಾಂಡಿತ್ಯವಲ್ಲ. ಅವರು ಹೇಳುವ ಪ್ರಕಾರ, ಮಾನವನ ಸಮಗ್ರ ಬೆಳವಣಿಗೆ ಅಥವಾ 'ಮಾನವ–ನಿರ್ಮಾಣ ಶಿಕ್ಷಣ'ವೇ ನಿಜವಾದ ಶಿಕ್ಷಣ.

### ಶೈಕ್ಷಣಿಕ ತತ್ತ್ವಕ್ಕೆ ಸ್ವಾಮಿ ವಿವೇಕಾನಂದರ ಕೊಡುಗೆ

ಸ್ವಾಮೀಜಿಯವರ ಶೈಕ್ಷಣಿಕ ಸಿದ್ಧಾಂತದ ತಿರುಳು ಎಂದರೆ, ಅವರು ಶಿಕ್ಷಣದ ಬಗ್ಗೆ ನೀಡಿದ ಪ್ರಸಿದ್ಧ ವ್ಯಾಖ್ಯಾನ: **"ವಿದ್ಯಾಭ್ಯಾಸವೆಂದರೆ ಮಾನವನಲ್ಲಿ ಈಗಾಗಲೇ ಅಡಗಿರುವ ಪರಿಪೂರ್ಣತೆಯ ಪ್ರಕಟಣೆ."** ಇಲ್ಲಿ ಪರಿಪೂರ್ಣತೆಯ ಪ್ರಕಟಣೆ ಎನ್ನುವುದು ಮಾನವ ವ್ಯಕ್ತಿತ್ವದ ಲೌಕಿಕ ಆಯಾಮದ ಸಮಗ್ರ ಬೆಳವಣಿಗೆಯನ್ನು ಸೂಚಿಸುತ್ತದೆ. ಈ ವ್ಯಾಖ್ಯಾನದ ಮೂಲಕ ಸ್ವಾಮೀಜಿ ಶಿಕ್ಷಣವನ್ನು ಜೀವನದೊಂದಿಗೆ ಸಮೀಕರಿಸಿದ್ದಾರೆ. ಅಮೆರಿಕದ ಶಿಕ್ಷಣತಜ್ಞ ಡ್ಯೂಯಿ ಬಹಳ ವರ್ಷಗಳ ನಂತರ ಇದೇ ರೀತಿಯ ಸಿದ್ಧಾಂತವನ್ನು ಪ್ರತಿಪಾದಿಸಿದನು. ಇದಲ್ಲದೆ, ಸ್ವಾಮೀಜಿಯವರ ಸಿದ್ಧಾಂತವು ಫ್ರೋಬೆಲ್, ಡ್ಯೂಯಿ ಮುಂತಾದ ಇನ್ನಿತರ ಆಧುನಿಕ ಶಿಕ್ಷಣ ತಜ್ಞರ ಅಭಿಪ್ರಾಯಗಳಿಗಿಂತ ಬಹಳಷ್ಟು ಆಳವನ್ನು ಹೊಂದಿದೆ.

ಮೇಲೆ ಉಲ್ಲೇಖಿಸಿದ ಆಧುನಿಕ ಚಿಂತಕರ ಪ್ರಕಾರ, ಒಂದು ಮಗುವನ್ನು ಜಡವಸ್ತುವೆಂದು, ಹಾಗೆಯೇ ಆತನ ಮನಸ್ಸನ್ನು ಖಾಲಿ ಎಂದೂ ಪರಿಗಣಿಸಬಾರದು. ಒಂದು ಮಗು ತನ್ನದೇ ಆದ ಸಂವೇದನೆಗಳನ್ನು, ಸಂಸ್ಕಾರಗಳನ್ನು, ಸುತ್ತಲ ವಾತಾವರಣದಿಂದ ಸ್ವೀಕರಿಸುವ ಮತ್ತು ಬೆಳೆಯುವ ಸಾಧ್ಯತೆಯನ್ನು ಪಡೆದುಕೊಂಡೇ ಹುಟ್ಟಿರುತ್ತದೆ. ಈ ಪ್ರಕ್ರಿಯೆಯಲ್ಲಿ, ಈ ಅಂತರ್ಗತ ಗುಣಗಳು ಅವನ ಸಾಮರ್ಥ್ಯಗಳನ್ನು ಮತ್ತು ಪ್ರತಿಭೆಗಳನ್ನು ಹೊರಗೆ ತರುತ್ತವೆ. ಸ್ವಾಮೀಜಿಯವರು ಇದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತಾರೆ. ಅವರು ಈ ಸಂದರ್ಭದಲ್ಲಿ ಗಿಡದ ಉದಾಹರಣೆಯನ್ನು ನೀಡುತ್ತಾರೆ. ಗಿಡದ ಬೆಳವಣಿಗೆಯನ್ನು ಕ್ಷಿಪ್ರಗೊಳಿಸಲು ನಾವೇನು ಮಾಡಬಹುದು? ಅದಕ್ಕೆ ನೀರು ಮತ್ತು ಗೊಬ್ಬರವನ್ನು ಒದಗಿಸಬಹುದು ಅಷ್ಟೇ. ಆದರೆ ಗಿಡವು ತಾನೇ ಅದನ್ನು ಹೀರಿಕೊಂಡು, ಬೆಳೆಯಬೇಕಾಗುತ್ತದೆ.

ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ:

"ಒಂದು ಮಗು ತನಗೆ ತಾನೇ ಕಲಿತುಕೊಳ್ಳುತ್ತದೆ. ಆದರೆ ಅದು ತನ್ನ ಮಾರ್ಗದಲ್ಲಿ ಮುಂದೆ ಸಾಗುವುದಕ್ಕೆ ನೀವು ಸಹಾಯ ಮಾಡಬಹುದು. ಇಲ್ಲಿ ನೀವು ಮಾಡುವುದು ಸಕಾರಾತ್ಮಕವಾದುದೇನೂ ಅಲ್ಲ, ನಕಾರಾತ್ಮಕವಾದುದು. ನೀವು ಅಡೆತಡೆಗಳನ್ನು ನಿವಾರಣೆ ಮಾಡಬಹುದು, ಆದರೆ ಜ್ಞಾನವು ಸ್ವಭಾವಸಹಜವಾಗಿಯೇ ಅಂತರಂಗದಿಂದ ಮೂಡಿಬರುತ್ತದೆ. ಗಿಡದ ಸುತ್ತಲಿನ ಮಣ್ಣನ್ನು ಸ್ವಲ್ಪ ಸಡಿಲ ಮಾಡಿ; ಆಗ ಅದು ಸುಲಭವಾಗಿ ಮೇಲಕ್ಕೆ ಬರುತ್ತದೆ. ಅದರ ಸುತ್ತಲೂ ಬೇಲಿ ಹಾಕಿ, ಅದನ್ನು ಯಾರೂ ನಾಶಗೊಳಿಸದಂತೆ ನೋಡಿಕೊಳ್ಳಿ. ಅಲ್ಲಿಗೆ ನಿಮ್ಮ ಕರ್ತವ್ಯ ಮುಗಿಯಿತು. ನೀವು ಇನ್ನೇನನ್ನೂ ಮಾಡಲಾರಿರಿ. ಇನ್ನು ಮುಂದಾಗಬೇಕಾದುದು ಬೀಜ ಮೊಳೆಯುವಿಕೆ. ಅದು ಅದರ ಸ್ವಭಾವದಲ್ಲಿಯೇ ಇದೆ. ಇದೇ ರೀತಿ ಮಗುವಿನ ಶಿಕ್ಷಣದ ವಿಷಯದಲ್ಲಿಯೂ. ಮಗುವೊಂದು ತನಗೆ ತಾನೇ ಕಲಿತುಕೊಳ್ಳುತ್ತದೆ."

"ಹೀಗಾಗಿ ಎಲ್ಲ ರೀತಿಯ ಜ್ಞಾನವೂ, ಲೌಕಿಕವಾಗಲಿ ಅಥವಾ ಆಧ್ಯಾತ್ಮಿಕವಾಗಲಿ, ಮಾನವನ ಮನಸ್ಸಿನಲ್ಲಿಯೇ ಇರುತ್ತದೆ. ಬಹುತೇಕ ಸಂದರ್ಭಗಳಲ್ಲಿ ಅದು ಇನ್ನೂ ಬೆಳಕಿಗೇ ಬಂದಿರುವುದಿಲ್ಲ; ಕವಿದುಕೊಂಡೇ ಇರುತ್ತದೆ. ಯಾವಾಗ ಪರದೆಯು ನಿಧಾನವಾಗಿ ಸರಿಯುವುದೋ, ಆಗ "ನಾನು ಕಲಿಯುತ್ತಿದ್ದೇನೆ" ಎಂದು ಹೇಳಿಕೊಳ್ಳುತ್ತೇವೆ. ಜ್ಞಾನದ ಪ್ರಗತಿಯು ಉಂಟಾಗುವುದು ಈ ಸರಿಯುವ ಪ್ರಗತಿಯಿಂದಲೇ. ಯಾರಲ್ಲಿ ಈ ಪರದೆಯು ಸರಿಯುತ್ತ ಇದೆಯೋ, ಅವನು ಹೆಚ್ಚು ಜ್ಞಾನ ಉಳ್ಳವನು. ಯಾರಲ್ಲಿ ಈ ಪರದೆಯು ಇನ್ನೂ ದಟ್ಟವಾಗಿ ಮುಚ್ಚಿಕೊಂಡಿದೆಯೋ, ಅವನು ಅಜ್ಞಾನಿ. ಯಾರಲ್ಲಿ ಈ ಪರದೆಯು ಸಂಪೂರ್ಣವಾಗಿ ಸರಿದುಹೋಗಿದೆಯೋ, ಅವನು ಸರ್ವಶಕ್ತನೂ, ಸರ್ವಜ್ಞನೂ ಆಗುತ್ತಾನೆ."

ಶಿಕ್ಷಣದ ಸಮಸ್ಯೆಯು ಮಾನವನ ಸ್ವಭಾವದ ಬಗ್ಗೆ ನಮಗೆ ಇರುವ ಕಲ್ಪನೆಯನ್ನೇ ಹೆಚ್ಚಾಗಿ ಆಧರಿಸಿದೆ. ಇಲ್ಲಿ ಸ್ವಾಮೀಜಿ ಆಧುನಿಕ ಶಿಕ್ಷಣತಜ್ಞರಿಗಿಂತ ಭಿನ್ನವಾದ ನಿಲುವನ್ನು ವ್ಯಕ್ತಪಡಿಸುತ್ತಾರೆ ಎನ್ನಬಹುದು. ಆಧುನಿಕ ಶಿಕ್ಷಣತಜ್ಞರು ಮಾನವನನ್ನು ಶರೀರ–ಮನಸ್ಸಿನ ಹಂತಕ್ಕೆ ಸೀಮಿತಗೊಳಿಸುತ್ತಾರೆ. ಆದರೆ ಸ್ವಾಮೀಜಿ ಮಾನವನ ವ್ಯಕ್ತಿತ್ವದ ಅಂತರಾಳದ ಅನ್ವೇಷಣೆಯಲ್ಲಿ ತೊಡಗುತ್ತಾರೆ. ಅವರ ಪ್ರಕಾರ, ಮಾನವ ನೈಜ ಸ್ವಭಾವವೆಂದರೆ, ಶುದ್ಧ ಚೈತನ್ಯ. ಮನಸ್ಸು ಮತ್ತು ದೇಹಗಳು ಈ ಆತ್ಮವಸ್ತುವಿನ ಬಾಹ್ಯ ಆವರಣಗಳು, ಅಷ್ಟೇ. ಆತ್ಮವು ಪರಿಪೂರ್ಣವೂ, ಸ್ವಯಂಜ್ಯೋತಿಸ್ವರೂಪವೂ ಆಗಿದೆ. ವಿವಿಧ ಬಣ್ಣಗಳ ಮತ್ತು ಆಕೃತಿಗಳ ಗಾಜುಗಳ ಮೇಲೆ ಹಾದುಹೋಗುವ ಬೆಳಕು, ಆಯಾ ಬಣ್ಣಗಳನ್ನು ಮತ್ತು ಆಕೃತಿಗಳನ್ನು ಪಡೆದುಕೊಳ್ಳುವುದಷ್ಟೇ. ಅದರಂತೆಯೇ, ಆತ್ಮದ ಬೆಳಕು ಮನಸ್ಸಿನ ಮೂಲಕ ಹಾದುಹೋಗುವಾಗ, ಆಲೋಚನೆಗಳನ್ನು ಮತ್ತು ಬಾಹ್ಯ ವಸ್ತುಗಳ ರೂಪವನ್ನು ಪಡೆದುಕೊಳ್ಳುತ್ತದೆ. ಹೀಗೆ ಅರಿವು ಅಥವಾ ಅನುಭವದ ಪ್ರತಿಯೊಂದು ಕ್ರಿಯೆ ಕೂಡ ಈ ಆಂತರಿಕ ಬೆಳಕಿನ ಅಭಿವ್ಯಕ್ತಿಯೇ ಆಗಿದೆ. ವೇದಾಂತದ ಈ ಪರಿಕಲ್ಪನೆಯನ್ನು ಶಿಕ್ಷಣಕ್ಕೂ ವಿಸ್ತರಿಸಿದಾಗ ನಮ್ಮ ಗಮನಕ್ಕೆ ಬರುವುದು ಇಷ್ಟು: ಯಾವುದು

ನಮ್ಮನ್ನು ಸರಿಯಾಗಿ ಅರಿತುಕೊಳ್ಳಲು ನೆರವಾಗುತ್ತದೆಯೋ, ಅದೇ ನಿಜವಾದ ಶಿಕ್ಷಣ. ಆದ್ದರಿಂದ, ಯಾವ ಪರಿಪೂರ್ಣ ಜ್ಞಾನದ ಮೂಲಕ ಆತ್ಮದ ಅಂತರಂಗದ ಬೆಳಕು ಸಂಪೂರ್ಣವಾಗಿ ಪ್ರಕಟ ಹೊಂದುವುದೋ ಅಂತಹ ಶಿಕ್ಷಣವನ್ನು ದೊರಕಿಸಿಕೊಡುವ ಶಿಕ್ಷಣವೇ ಅತ್ಯಂತ ಶ್ರೇಷ್ಠಮಟ್ಟದ ಶಿಕ್ಷಣ.

## ಶಿಕ್ಷಣದ ಕೇಂದ್ರವಾಗಿ ಧರ್ಮ

ಸ್ವಾಮಿ ವಿವೇಕಾನಂದರು 'ಧರ್ಮ' ಮತ್ತು 'ಶಿಕ್ಷಣ'ಗಳಿಗೆ ನೀಡಿದ ಎರಡು ಪ್ರತ್ಯೇಕ ವ್ಯಾಖ್ಯಾನಗಳ ನಡುವೆ ಇರುವ ಸಮಾನ ಅಂಶವನ್ನು ಮೇಲಿನ ಚರ್ಚೆಯಿಂದ ನಾವು ಸಮರ್ಥಿಸಿಕೊಳ್ಳಬಹುದು. ಸ್ವಾಮೀಜಿಯ ಧರ್ಮದ ಬಗೆಗಿನ ವ್ಯಾಖ್ಯಾನ ಹೀಗಿದೆ: "ಧರ್ಮವೆಂದರೆ ಮಾನವನಲ್ಲಿ ಈಗಾಗಲೇ ಇರುವ ದಿವ್ಯತೆಯ ಅಭಿವ್ಯಕ್ತಿ." ಸ್ವಾಮೀಜಿಯವರ ಪ್ರಕಾರ, ಶಿಕ್ಷಣವು ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳುವುದಕ್ಕೆ ವ್ಯಕ್ತಿಯೊಬ್ಬನು ಕೈಗೊಳ್ಳುವ ಮಹಾನ್ ಪ್ರಯತ್ನದ ಒಂದು ಭಾಗ ಮಾತ್ರ. ಆ ಆತ್ಮಸಾಕ್ಷಾತ್ಕಾರವನ್ನೇ ಸ್ವಾಮೀಜಿ 'ಧರ್ಮ' ಎಂದು ಕರೆದರು. ಆಧುನಿಕ ಶಿಕ್ಷಣತಜ್ಞರು 'Self' ಎನ್ನುವ ಪಾರಿಭಾಷಿಕ ಪದವನ್ನು ನಾವು ಸಾಮಾನ್ಯ ಭಾಷೆಯಲ್ಲಿ ಬಳಸುವ 'ನಾನು' ಅಥವಾ 'ಅಹಂ' ಅನ್ನು ಸೂಚಿಸಲು ಉಪಯೋಗಿಸುತ್ತಾರೆ. ಸ್ವಾಮೀಜಿ ಈ ಪದವನ್ನು ವೇದಾಂತವು ನಿರೂಪಿಸುವ ಅತೀಂದ್ರಿಯ ಆತ್ಮವನ್ನು ಸೂಚಿಸಲು ಬಳಸುತ್ತಾರೆ. ಸ್ವಾಮೀಜಿ ಹೇಳುತ್ತಾರೆ: "ಧರ್ಮವು ಶಿಕ್ಷಣದ ಅತ್ಯಂತ ಅಂತರಾಳದ ಕೇಂದ್ರವೆಂದು ನಾನು ಭಾವಿಸುತ್ತೇನೆ."

ಎಫ್. ಎಚ್. ಹರ್ಬರ್ಟ್ ಎಂಬ ಶಿಕ್ಷಣತಜ್ಞನು, ಪಠ್ಯಕ್ರಮವು ಒಂದು 'ಕೇಂದ್ರ ಪಠ್ಯವಿಷಯ'ದ (Core Subject) ಸುತ್ತಲೂ ರೂಪುಗೊಂಡಿರಬೇಕಾದ ಆವಶ್ಯಕತೆಯನ್ನು ಗುರುತು ಮಾಡಿ ತೋರಿಸುತ್ತಾನೆ. ಮಾನವ ಜನಾಂಗದ ಇತಿಹಾಸವೇ ಆ ಕೇಂದ್ರ ವಿಷಯವಾಗಬೇಕೆಂದು ಅವನ ಅಭಿಪ್ರಾಯ. ಇನ್ನುಳಿದ ಪಠ್ಯವಿಷಯಗಳನ್ನು, ಕೇಂದ್ರ ಪಠ್ಯವಿಷಯದ ಜೊತೆಗೇ ಬೋಧಿಸಬೇಕು. ಕೇಂದ್ರ ವಿಷಯಕ್ಕೂ, ಇತರ ವಿಷಯಗಳಿಗೂ ಇರುವ ಆಂತರಿಕ ಸಂಬಂಧಗಳನ್ನು ತಿಳಿಸಿಕೊಡಬೇಕು. ಸ್ವಾಮೀಜಿಯವರ ಶೈಕ್ಷಣಿಕ ಭಾವನೆ ಇದಕ್ಕಿಂತ ಭಿನ್ನವಾಗಿದೆ. ಅವರು ಭಾರತೀಯ ಶಿಕ್ಷಣದ ಪಠ್ಯಕ್ರಮವು, ಧರ್ಮ ಅಥವಾ ಆಧ್ಯಾತ್ಮಿಕತೆಯನ್ನೇ ಕೇಂದ್ರ ಪಠ್ಯವಿಷಯವನ್ನಾಗಿ ಹೊಂದಿರಬೇಕೆಂದು ಹೇಳುತ್ತಾರೆ. ಇದು ಬಹುಜನರಿಗೆ ತೋರುವಂತೆ ಅಪ್ರಾಯೋಗಿಕವೇನೂ ಅಲ್ಲ. ಮಕ್ಕಳಿಗೆ, ಅವರ ನೈಜ ಸ್ವಭಾವವು ಪರಿಶುದ್ಧವಾದುದು ಹಾಗೂ ಅವರೆಲ್ಲ ವಿಶ್ವಜೀವನದ ಅಂಗಗಳು ಎಂದು ಹೇಳಿಕೊಡಲು ಖಂಡಿತ ಸಾಧ್ಯವಿದೆ. ಬಹಳ ಚಿಕ್ಕ ವಯಸ್ಸಿನಲ್ಲೇ, ಇಡೀ ಜೀವನವನ್ನು ಪವಿತ್ರವನ್ನಾಗಿ ಕಾಣಲು ಅವರಿಗೆ ಹೇಳಿಕೊಡಬಹುದು. ಪ್ರತಿಯೊಂದು ಒಳ್ಳೆಯ ಕಾರ್ಯವೂ – ಅದು ದೈಹಿಕವಾಗಿರಲಿ ಅಥವಾ ಮಾನಸಿಕವಾಗಿರಲಿ – ಜೀವನದಲ್ಲಿ ಅಂತರ್ಗತವಾಗಿರುವ ದಿವ್ಯತೆಯನ್ನು ಪ್ರಕಟಗೊಳಿಸುವ ಪ್ರಯತ್ನವೇ ಎಂದು ಅವರಿಗೆ ಬೋಧಿಸಬಹುದು. ಹಾಗೆಯೇ, ಪ್ರತಿಯೊಂದು ಪ್ರಕಾರದ ಸೇವೆಯೂ, ಭಗವಂತನನ್ನು ಆರಾಧಿಸುವ ವಿಧಾನವೆಂದು ಅವರಲ್ಲಿ ಮನಗಾಣಿಸಬಹುದು. ಹಾಗೆ ನೋಡಿದರೆ, ವಿಜ್ಞಾನ, ಕಲೆ ಮತ್ತು ಸಮಾಜಶಾಸ್ತ್ರ – ಇವುಗಳನ್ನೂ ದಿವ್ಯಜೀವನದ ಅವಿಭಾಜ್ಯ ಅಂಗಗಳೆಂದು ನಾವು ಪರಿಗಣಿಸಬೇಕಾಗುತ್ತದೆ. ಆ ರೀತಿಯಲ್ಲಿಯೇ ಅವುಗಳನ್ನು ಮಕ್ಕಳಿಗೆ ಬೋಧಿಸಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ಜೀವನದ ಮುಖ್ಯ ಧ್ಯೇಯ ಆತ್ಮಸಾಕ್ಷಾತ್ಕಾರವೆಂದೂ, ಎಲ್ಲ ಬಗೆಯ ಸಾಧನೆಯೂ ಅದನ್ನು ಸಾಕಾರಮಾಡಿಕೊಳ್ಳುವ ಕಡೆಗಿನ ಮೆಟ್ಟಿಲುಗಳೆಂದೂ ಮಕ್ಕಳಿಗೆ ತಿಳಿಸಿಕೊಡಬೇಕು. ಪಠ್ಯವಿಷಯಗಳಾದ ವಿಜ್ಞಾನ, ಕಲೆ ಮತ್ತು ಸಮಾಜ ಶಾಸ್ತ್ರಗಳ ಅಧ್ಯಯನಕ್ಕೆ ಕೂಡ ಒಂದು ಉನ್ನತ ಮಟ್ಟದ ಉದ್ದೇಶ ಅಥವಾ ಧ್ಯೇಯ ಇದೆ ಎಂದು ಮಕ್ಕಳು ಅರಿತುಕೊಂಡಾಗ, ಇಡೀ ಜೀವನವೇ ಅವರಿಗೆ ಅರ್ಥವತ್ತಾಗಿ ಕಂಡುಬರುತ್ತದೆ. ಹಾಗೆಯೇ ಇಡೀ ಅಸ್ತಿತ್ವವೇ ಅವರಿಗೆ ಮಹಾನ್ ಅವಕಾಶದಂತೆ ತೋರಿಬರುತ್ತದೆ. ಈ ಬಗೆಯ ಮನೋಧರ್ಮವು ಅವರಲ್ಲಿ ಪ್ರಚಂಡ ಆಶಾಭಾವನೆಯನ್ನೂ, ಆತ್ಮವಿಶ್ವಾಸವನ್ನೂ ಕೆರಳಿಸುತ್ತದೆ. ಹಾಗೂ ಅವರು ಬೆಳೆದಂತೆಲ್ಲ, ತಮ್ಮ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಲು ಸನ್ನದ್ಧರಾಗುತ್ತಾರೆ. ಈ ರೀತಿಯಲ್ಲಿ ಅವರು ತಮ್ಮ ಜೀವನವನ್ನು ಮತ್ತು ಇತರರ ಜೀವನವನ್ನು ಮಂಗಳಮಯವನ್ನಾಗಿ ಮಾಡಿಕೊಳ್ಳುತ್ತಾರೆ. **'ಧರ್ಮವೇ ಶಿಕ್ಷಣದ ಸಾರತತ್ತ್ವ'** ಎಂದು ಹೇಳುವಾಗ, ಸ್ವಾಮೀಜಿಯವರ ಮನಸ್ಸಿನಲ್ಲಿ ಇದ್ದ ಉದ್ದೇಶ ಇದೇ ಆಗಿತ್ತು ಎಂದು ಧಾರಾಳವಾಗಿ ಹೇಳಬಹುದು.

ಧರ್ಮವೇ ಶಿಕ್ಷಣದ ಸಾರತತ್ತ್ವ ಎನ್ನುವ ಸ್ವಾಮೀಜಿಯವರ ಸಿದ್ಧಾಂತದ ಜೊತೆಗೆ ನಿಕಟವಾಗಿ ಸಂಬಂಧ ಹೊಂದಿರುವ ಇನ್ನೊಂದು ಭಾವನೆಯೆಂದರೆ, **'ಶಿಕ್ಷಣದ ಉದ್ದೇಶ ಮಾನವ ನಿರ್ಮಾಣ ಮತ್ತು ಚಾರಿತ್ರ್ಯ ನಿರ್ಮಾಣ'** ಎಂಬುದು. ಹರ್ಬರ್ಟ್ ತನ್ನ ಹೆಸರಾಂತ ಹೇಳಿಕೆಯೊಂದರಲ್ಲಿ, ಶಿಕ್ಷಣದ ಉದ್ದೇಶವೆಂದರೆ ಚಾರಿತ್ರ್ಯದ ರೂಪುಗೊಳ್ಳುವಿಕೆ ಎಂದು ಹೇಳುತ್ತಾನೆ. ಮೇಲುನೋಟಕ್ಕೆ ಸ್ವಾಮೀಜಿಯವರ ಭಾವನೆಯೂ ಇದೇ ರೀತಿ ಇರುವ ಹಾಗೆ ಕಾಣಿಸುತ್ತದೆ. ಆದರೆ ಹರ್ಬರ್ಟ್ ಮುಂದಿಡುವ ನೀತಿಯ ಪರಿಕಲ್ಪನೆ ಸಾಮಾಜಿಕ ಕಟ್ಟುಪಾಡುಗಳಿಗೆ ಮತ್ತು ಬೈಬಲ್ಲಿನ ಆದೇಶಗಳಿಗೆ ವಿಧೇಯನಾಗಿರುವುದರ ಮೇಲೆ ಅವಲಂಬಿಸಿದೆ. ಆದರೆ ಸ್ವಾಮೀಜಿ ಮುಂದಿಡುವ ನೀತಿಯ ಪರಿಕಲ್ಪನೆ ಮಾನವನಲ್ಲಿ ಅಂತರ್ಗತವಾಗಿರುವ ದಿವ್ಯತೆಯ ಅಭಿವ್ಯಕ್ತಿ ಎಂಬ ಇನ್ನೂ ಆಳವಾದ ಸಿದ್ಧಾಂತದ ಮೇಲೆ ಆಧರಿಸಿದೆ.

## ಉಪಸಂಹಾರ

ಮಾನವ ಇತಿಹಾಸದ ಪ್ರಾರಂಭಭಾಗದಲ್ಲಿ, ಶಿಕ್ಷಣದ ಕಲ್ಪನೆಯು ಜೀವನಕ್ಕೆ ಬೇಕಾದ ಕೆಲವು ಕುಶಲತೆಗಳನ್ನು ಮೈಗೂಡಿಸಿಕೊಳ್ಳುವ ಮಟ್ಟಕ್ಕೆ ಮಾತ್ರ ಸೀಮಿತವಾಗಿತ್ತು. ಅದು ಕ್ರಮೇಣ ವಿಕಸನಗೊಂಡು, ಸ್ವಾಮೀಜಿ ಪ್ರತಿಪಾದಿಸಿದ ಮಾನವ–ನಿರ್ಮಾಣ ಸಿದ್ಧಾಂತವಾಗಿ ರೂಪುಗೊಂಡಿತು. ಈ ಸಿದ್ಧಾಂತದಲ್ಲಿ ಮಾನವ ಜೀವಿತ ಮತ್ತು ಚೈತನ್ಯದ ವಿಕಾಸವೇ ಶಿಕ್ಷಣ ಎಂಬ ಅಂಶವೇ ಪ್ರಧಾನವಾಗಿದೆ. ಮಾನವಕುಲವು ಆಲೋಚಿಸಿರುವ ಅತ್ಯಂತ ಉನ್ನತ ಮಟ್ಟದ ಶೈಕ್ಷಣಿಕ ವಿಧಾನ ಇದಾಗಿದೆ. ಇಂತಹ ಶ್ರೇಷ್ಠ ಶೈಕ್ಷಣಿಕ ಚಿಂತನವೇ ಮನುಕುಲಕ್ಕೆ ಸ್ವಾಮಿ ವಿವೇಕಾನಂದರು ನೀಡಿರುವ ಅತ್ಯಂತ ಮಹತ್ವದ ಕೊಡುಗೆಗಳಲ್ಲಿ ಒಂದು.

# ಸ್ವಾಮಿ ವಿವೇಕಾನಂದರು

ಹಾಗೂ

# ಉಪನಿಷತ್ತುಗಳು

ಸ್ವಾಮಿ ಕರುಣಾಕರಾನಂದ



**ಪ್ರಾಚೀನ ಉಪನಿಷತ್ತುಗಳ ಅಮೃತವಾಣಿಯೇ ಆಧುನಿಕ ಕಾಲದಲ್ಲಿ ಸ್ವಾಮಿ ವಿವೇಕಾನಂದರ ಮುಖಾರವಿಂದದ ಮೂಲಕ ಮೂಡಿಬಂದಿದೆ. ಹೀಗಾಗಿ ಸ್ವಾಮೀಜಿಯವರಿಗೂ ಉಪನಿಷತ್ತುಗಳಿಗೂ ಅವಿನಾಭಾವ ಸಂಬಂಧ. ಈ ಅಂಶವನ್ನು ವಿದ್ವತ್ಪೂರ್ಣವಾಗಿ ಪ್ರತಿಪಾದಿಸಿರುವ ಸ್ವಾಮೀಜಿಯವರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಶಾಸ್ತ್ರಗಳಲ್ಲಿ ವಿಶೇಷ ಪರಿಣತಿಯನ್ನು ಪಡೆದಿದ್ದಾರೆ. ಇವರು ಉತ್ತಮ ವಾಗ್ಮಿಗಳು ಮತ್ತು ಬರಹಗಾರರು ಕೂಡ.**

ಉಪನಿಷತ್ತುಗಳನ್ನು ವೇದಾಂತವೆಂದೂ ಕರೆಯುತ್ತಾರೆ. ವೇದದ ಶಿರೋಪ್ರಾಯವಾಗಿರುವುದರಿಂದ, ಯಾವುದನ್ನು ತಿಳಿದುಕೊಂಡರೆ ಮತ್ತೆ ತಿಳಿಯಬೇಕಾದದ್ದು ಯಾವುದೂ ಇರದೋ ಅಂತಹ ವಿದ್ಯೆಯನ್ನು ಬೋಧಿಸುವುದರಿಂದ, ವೇದಗಳ ಉದ್ದೇಶದ ನಿಶ್ಚಯ ಅವುಗಳಲ್ಲಿ ಉಂಟಾಗುವುದರಿಂದ, ಉಪನಿಷತ್ತುಗಳನ್ನು 'ವೇದಾಂತ'ವೆಂದು ವ್ಯವಹರಿಸಲಾಗುತ್ತದೆ.

ಈ ಉಪನಿಷತ್ತುಗಳ ಸಾರವನ್ನೇ ಅನುಷ್ಠಾನಾತ್ಮಕವಾಗಿ ಹೇಗೆ ಜೀವನದ ಪ್ರತಿಯೊಂದು ಹೆಜ್ಜೆಯಲ್ಲೂ ಮನುಷ್ಯ ಬಳಸಿಕೊಳ್ಳುತ್ತ, ತನ್ನೊಳಗೆ ಇರುವ ಸತ್ಯವನ್ನು ಕಂಡುಕೊಳ್ಳಬಹುದೆಂದು ಸ್ವಾಮೀಜಿ ತಮ್ಮ ಎಲ್ಲ ಉಪನ್ಯಾಸಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಮಾನವ ತನ್ನನ್ನು ತಾನು ಯಾವ ಪರಿಕಲ್ಪನೆಯಿಂದ ನೋಡುತ್ತಾನೋ ಅದರಂತೆ ಅವನ ಗುರಿ, ಸಾಧನೆ, ದೈನಂದಿನ ವ್ಯವಹಾರ, ಆಲೋಚನೆಗಳು, ಪರಸ್ಪರ ವ್ಯವಹಾರ, ಸಮಾಜಗಳು ರೂಪುಗೊಳ್ಳುತ್ತವೆ. ಅವನ ಗುರಿಸಾಧನೆಗೆ ಅಡ್ಡ ಬಂದ ಸಮಸ್ಯೆಗಳಿಗೆ ಪರಿಹಾರದ ವಿಧಾನವೂ ಕೂಡ ತನ್ನ ಬಗೆಗಿನ ಅವನ ಪರಿಕಲ್ಪನೆಯ ಮೇಲೆಯೇ ನಿಂತಿರುತ್ತದೆ. ಒಬ್ಬ ಪುರುಷನ ಗುರಿ, ಸಾಧನೆ, ಪರಸ್ಪರ ಒಡನಾಟ, ಸಮಾಜದ ಪರಿಕಲ್ಪನೆಗಳು ಸ್ತ್ರೀಯರದ್ದಕ್ಕಿಂತ ಬೇರೆಯೆ ಆಗಿರುತ್ತವೆ; ಹಾಗೆಯೇ ಒಬ್ಬ ಯುವಕನ ಪರಿಕಲ್ಪನೆಗಳಿಗಿಂತ ಮಧ್ಯವಯಸ್ಸನ್ನು ದಾಟಿರುವ ಒಬ್ಬ ಪುರುಷನವು ಬೇರೆಯೇ ಆಗಿರುತ್ತವೆ. ತನ್ನ ಕುರಿತಾದ ಈ ಪರಿಕಲ್ಪನೆಯು ಸಂಸ್ಕಾರದ ರೂಪದಲ್ಲಿ ಮನುಷ್ಯನಲ್ಲಿ ಸುಪ್ತವಾಗಿರುವುದರಿಂದ ಅದು ಅವನ ಎಲ್ಲ ಆಲೋಚನೆ ಹಾಗೂ ಚಟುವಟಿಕೆಗಳಿಗೆ ಕಾರಣವಾಗಿದ್ದರೂ, ಅಲ್ಲದೆ ಅವುಗಳನ್ನು ನಿಯಂತ್ರಿಸುತ್ತಿದ್ದರೂ, ಅವನಿಗೇ ಅದರ ಜ್ಞಾನವಿಲ್ಲದೆ ಇರಬಹುದು. ಹಾಗೆಯೇ, ವಯಸ್ಸಾದಂತೆ ಪ್ರಕೃತಿಯಿಂದ ಪಾಠ ಕಲಿಯುತ್ತಿದ್ದಂತೆ, ಜೀವನದೊಂದಿಗೆ ಸಂಘರ್ಷ ಮಾಡುತ್ತಿದ್ದಂತೆ, ನಿಧಾನವಾಗಿ ಅವನ ಪರಿಕಲ್ಪನೆಯಲ್ಲಿ ಬದಲಾವಣೆಯಾಗುತ್ತಿರುತ್ತದೆ. ಅದು ಅವನ ಅರಿವಿಗೆ ಬರಬಹುದು, ಬರದೆಯೂ ಇರಬಹುದು. ಅವನ ಆಲೋಚನೆ ಹಾಗೂ ಕರ್ಮಗಳೂ ಕೂಡ ಅವನ ಸುಪ್ತ ಪರಿಕಲ್ಪನೆಯನ್ನು ದೃಢಗೊಳಿಸುತ್ತ ಇರುತ್ತವೆ. ಆದರೆ, ಇಂತಹ ಅಸ್ಥಿರವಾದ, ಅಪರಿಪೂರ್ಣವಾದ ಪರಿಕಲ್ಪನೆಗಳು ಹಾಗೂ ಅವುಗಳಿಂದ ನಿಯಂತ್ರಿಸಲ್ಪಡುವ ಅವನ ಎಲ್ಲ ಆಲೋಚನೆ ಹಾಗೂ ಚಟುವಟಿಕೆಗಳು ಅವನ ಜೀವನವನ್ನು ಆನಂದಮಯವನ್ನಾಗಿಸವು, ಪರಿಪೂರ್ಣವಾಗಿ ಮಾಡಲಾರವು, ಶಾಂತಿಯನ್ನು ನೀಡಲಾರವು. ಹೀಗಾಗಿ ಮನುಷ್ಯನು

ತನ್ನ ಜೀವನದಲ್ಲಿ ಸಾರ್ಥಕತೆಯನ್ನು ಕಾಣಬೇಕಾದರೆ, ಮೊದಲು ತನ್ನ ಪರಿಚಯವನ್ನು ಆಳವಾಗಿ ಮಾಡಿಕೊಳ್ಳಬೇಕಾಗುತ್ತದೆ. ತನ್ನ ಕುರಿತಾದ ತಪ್ಪಾದ ಹಾಗೂ ಅಪರಿಪೂರ್ಣ ಕಲ್ಪನೆಗಳನ್ನು ಸರಿಯಾದ ಜ್ಞಾನದಿಂದ ಹೋಗಲಾಡಿಸಿಕೊಳ್ಳುವುದು ಮೊದಲ ಹೆಜ್ಜೆ. ಅಂತಹ ಜ್ಞಾನದಿಂದ ಪ್ರಚೋದಿತವಾದ ಅವನ ಆಲೋಚನೆಗಳು ಹಾಗೂ ಕರ್ಮಗಳು ಪುನಃ ಅವನ ಸ್ವಭಾವದ ಜ್ಞಾನವನ್ನು ದೃಢಪಡಿಸುತ್ತವೆ.

ಉಪನಿಷತ್ತುಗಳಲ್ಲಿ ನಮ್ಮ ನೈಜ ಸ್ವಭಾವದ ಪರಿಚಯವನ್ನು ಮಾಡಿಕೊಡಲಾಗಿದೆ. ಆದ್ದರಿಂದ ಸ್ವಾಮೀಜಿ ಉಪನಿಷತ್ತುಗಳನ್ನೇ ಸರಳ ಹಾಗೂ ಆಧುನಿಕ ಭಾಷೆಯಲ್ಲಿ ಬೋಧಿಸಿದರು. ಅವರೇ ಹೇಳುತ್ತಾರೆ, "…..ನಾನು ಉಪನಿಷತ್ತುಗಳನ್ನು ಮಾತ್ರ ಬೋಧಿಸುತ್ತೇನೆ. ನೀವು ಗಮನಿಸಿದರೆ ಗೊತ್ತಾಗುತ್ತದೆ, ನಾನು ಉಪನಿಷತ್ತುಗಳನ್ನಲ್ಲದೆ ಬೇರೆ ಏನನ್ನೂ ಉದ್ಧರಿಸಿಲ್ಲ ಎಂಬುದಾಗಿ…."

ಸ್ವಾಮೀಜಿಯವರ ಪ್ರಕಾರ ಹಗಲಿರುಳೂ ಮಹಾರಾಜ್ಯಗಳ ರಾಜ್ಯಭಾರ ಮಾಡುತ್ತಿದ್ದರೂ ನಿರ್ಲಿಪ್ತರಾಗಿರುತ್ತಿದ್ದ ರಾಜರ ಮಸ್ತಿಷ್ಕದಿಂದ ಉಪನಿಷತ್ತುಗಳೆಲ್ಲ ಹೊರಹೊಮ್ಮಿರುವುವು. ಅವರ ಈ ಅಭಿಪ್ರಾಯವನ್ನು ದೃಢೀಕರಿಸುವ ಹೇಳಿಕೆ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬರುತ್ತದೆ:

**"ಇಯಂ ವಿದ್ಯೇತಃ**
**ಪೂರ್ವಂ ನ ಕಸ್ಮಿಂಶ್ಚನ**
**ಬ್ರಾಹ್ಮಣ ಉವಾಸ**
(೬:೨:೮)

– "ಈ ವಿದ್ಯೆಯು ಇದಕ್ಕೆ ಮೊದಲು ಯಾವ ಬ್ರಾಹ್ಮಣನಲ್ಲಿಯೂ ಇರಲಿಲ್ಲ" ಎಂದು ಶ್ವೇತಕೇತುವಿನ ತಂದೆಯಾದ ಗೌತಮನಿಗೆ ರಾಜ ಪ್ರವಾಹಣ ಹೇಳುತ್ತಾನೆ.

ಉಪನಿಷತ್ತುಗಳಿಗೆ ರಹಸ್ಯವಿದ್ಯೆ ಎಂಬ ಇನ್ನೊಂದು ಹೆಸರೂ ಇದೆ. ಆದರೆ, ಸ್ವಾಮೀಜಿಯವರ ಪ್ರಕಾರ ಈ ವಿದ್ಯೆ ಕಾಡನ್ನು, ಗುಹೆಯನ್ನು ಬಿಟ್ಟು ನಾಡಿಗೆ ಬರಬೇಕು. ನ್ಯಾಯಸ್ಥಾನಕ್ಕೆ, ಬಡವನ ಗುಡಿಸಲಿಗೆ, ಮೀನು ಹಿಡಿಯುವ ಬೆಸ್ತರ ಬಳಿಗೆ, ಅಧ್ಯಯನನಿರತ ವಿದ್ಯಾರ್ಥಿಯ ಬಳಿಗೆ ಆ ಆಲೋಚನೆಗಳು ಹೋಗಬೇಕು. ಪ್ರತಿ ಪುರುಷ, ಸ್ತ್ರೀ, ಮಗುವಿನ ಬಳಿಗೆ ಹೋಗಬೇಕು. ಅವರು ಯಾವುದೇ ವೃತ್ತಿಯನ್ನು ಅನುಸರಿಸುತ್ತಿರಲಿ, ಅವರ ಜೀವನದಲ್ಲಿ ಅವು ಬೆರೆತು ಒಂದಾಗಬೇಕು. ಇದರಿಂದ ಅವರಿಗೆ ಆಗುವ ಲಾಭವೇನು? ಒಬ್ಬ ಬೆಸ್ತ ತಾನು ಆತ್ಮನೆಂದು ತಿಳಿದರೆ ಅವನು ಉತ್ತಮ ಬೆಸ್ತನಾಗುತ್ತಾನೆ. ವಿದ್ಯಾರ್ಥಿ ತಾನು ಆತ್ಮನೆಂದು ತಿಳಿದರೆ ಒಬ್ಬ ಒಳ್ಳೆಯ ವಿದ್ಯಾರ್ಥಿಯಾಗುವನು. ವಕೀಲನು ತಾನು ಆತ್ಮನೆಂದು ತಿಳಿದರೆ ಆತ ಉತ್ತಮ ವಕೀಲನಾಗುತ್ತಾನೆ. ಸ್ವಾಮೀಜಿಯವರ ಪ್ರಕಾರ ಇದರಿಂದ ವೃತ್ತಿ ಆಧಾರಿತ ಜಾತಿ ಉಳಿದುಕೊಂಡರೂ, ವಿಶೇಷ ಹಕ್ಕುಗಳು ಸಮಾಜದಲ್ಲಿ ಮಾಯವಾಗುವುವು. "ನಿನ್ನಂತೆಯೇ ನಾನೂ ಉತ್ತಮ; ನಾನು ಬೆಸ್ತನಿರಬಹುದು, ನೀನು ತತ್ತ್ವಜ್ಞಾನಿಯಾಗಿರಬಹುದು. ಆದರೆ ನಿನ್ನಲ್ಲಿರುವಂತೆಯೇ ನನ್ನಲ್ಲಿಯೂ ದೇವರು ಇರುವನು" ಎಂದು ಒಬ್ಬ ಬೆಸ್ತನೂ ಎದೆ ತಟ್ಟಿ ತನ್ನ ಸಮಾನತೆಯನ್ನು ಸಾರುವಂತೆ ಆಗುತ್ತದೆ. ಎಲ್ಲರಿಗೂ ಸಮಾನ ಅವಕಾಶವಿದ್ದು, ಯಾರಿಗೂ ಪ್ರತ್ಯೇಕ ಹಕ್ಕು ಇರುವುದಿಲ್ಲ. ಸಮಾಜವನ್ನು ಒಡೆಯುವುದು ಈ ಪ್ರತ್ಯೇಕ ಹಕ್ಕುಗಳು(privileges), ಜಾತಿಯಲ್ಲ. ಜಾತಿಯ ಅಸ್ತಿತ್ವದ ಹೊರತಾಗಿಯೂ ಉಪನಿಷತ್ತಿನಲ್ಲಿರುವ ಆತ್ಮತತ್ತ್ವವನ್ನು



ಪ್ರತಿಯೊಬ್ಬರಿಗೂ ಬೋಧಿಸಿದಾಗ ಮಾತ್ರ ಈ ಸಾಮಾಜಿಕ ಸಮಾನತೆಯನ್ನು ಸಾಧಿಸಬಹುದೆನ್ನುತ್ತಾರೆ ಸ್ವಾಮೀಜಿ. ಈ ದಿಸೆಯಲ್ಲಿ ಎಲ್ಲ ಸಮಾಜಶಾಸ್ತ್ರಜ್ಞರೂ ತಮ್ಮ ತಮ್ಮ ಪೂರ್ವ ಗ್ರಹಪೀಡಿತ ಆಲೋಚನೆಗಳಿಂದ ಮುಕ್ತರಾಗಿ ಚಿಂತಿಸಿದರೆ ಅವರಿಗೆ ಹೊಸ ಬೆಳಕೊಂದು ಇಲ್ಲಿ ಸಿಕ್ಕಿಯೇ ಸಿಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಉಪನಿಷತ್ತುಗಳಲ್ಲಿ ಮಾನವನ ಉದ್ಧಾರಕ್ಕಾಗಿ ಶಕ್ತಿಯನ್ನು ಬೋಧಿಸಲಾಗಿದೆ ಎನ್ನುತ್ತಾರೆ ಸ್ವಾಮೀಜಿ. ಅಲೆಕ್ಸಾಂಡರನು ತನ್ನ ಮಹಾಸೈನ್ಯಬಲವನ್ನು ಉಪಯೋಗಿಸಿ ಭಾರತವನ್ನು ಗೆದ್ದಿದ್ದರೂ ಒಮ್ಮೆ ಉಪನಿಷತ್ತಿನ ಆತ್ಮತತ್ತ್ವವನ್ನು ಅನುಭವಕ್ಕೆ ತಂದುಕೊಂಡಿದ್ದ ಸಂನ್ಯಾಸಿಯ ಆತ್ಮಶಕ್ತಿಯ ಮುಂದೆ ತತ್ತರಿಸಿಹೋದ ಚಿತ್ರಣವನ್ನು ಅವರು ನಮ್ಮ ಮುಂದಿಡುತ್ತಾರೆ. ಖಡ್ಗಶಕ್ತಿಯನ್ನೂ ಎದುರಿಸಿ ನಿಲ್ಲುವ ಆ ಧೈರ್ಯ ಆತನಿಗೆ ಅದೆಲ್ಲಿಂದ ಬಂದಿರಬೇಕು? ಅದು ಆತ್ಮಶಕ್ತಿಯಿಂದಲ್ಲದೆ ಬೇರಲ್ಲ. "ಶಕ್ತಿ, ಶಕ್ತಿ, ಪ್ರತಿ ಸಲವೂ ಶಕ್ತಿ. ಉಪನಿಷತ್ತುಗಳು ಶಕ್ತಿಯ ಮಹಾಗಣಿ. ಜಗತ್ತನ್ನೆಲ್ಲ ಜಾಗೃತ ಗೊಳಿಸುವಷ್ಟು ಶಕ್ತಿ ಅಲ್ಲಿದೆ. ಜಗತ್ತಿಗೆ ಅದರ ಮೂಲಕ ಜೀವದಾನ ಮಾಡಬಹುದು, ಶಕ್ತಿಯನ್ನು ನೀಡಬಹುದು, ಸ್ಫೂರ್ತಿಯನ್ನು ನೀಡಬಹುದು" ಎನ್ನುತ್ತಾರೆ ಸ್ವಾಮೀಜಿ.

ಉಪನಿಷತ್ತುಗಳು ಮಾನವನ ದೌರ್ಬಲ್ಯವನ್ನು ಹೆಕ್ಕಿ ತೋರಿಸದೆ, ಅವನ ದಿವ್ಯತೆಯನ್ನು ಮಾತ್ರ ಅವನಿಗೆ ತೋರಿಸುವುದು. ಮಾನವನಿಗೆ ಆ ಆತ್ಮದ ಪರಿಚಯ ಎಷ್ಟೆಷ್ಟು ಆಗುವುದೊ, ಅಷ್ಟಷ್ಟು ಶ್ರದ್ಧೆ ಹಾಗೂ ಶಕ್ತಿ ಅವನಲ್ಲಿ ಮೈಗೂಡುವುದು. ಮನುಷ್ಯನಲ್ಲಿ ಶ್ರದ್ಧೆ ಜಾಗೃತವಾದರೆ ತನ್ನ ಒಳಿತನ್ನು ತಾನೇ ಸಾಧಿಸಿಕೊಳ್ಳುತ್ತಾನೆಂದು ಸ್ವಾಮೀಜಿ ತಿಳಿದಿದ್ದರು. ಅದಕ್ಕಾಗಿಯೇ ಅವರು, "ಯಾರು ಮೂವತ್ತಮೂರು ಕೋಟಿ ದೇವತೆಗಳ ಮೇಲೆ ವಿಶ್ವಾಸವಿರಿಸಿ, ತನ್ನ ಮೇಲೆಯೇ ತಾನು ವಿಶ್ವಾಸವಿರಿಸಿಕೊಂಡಿಲ್ಲವೊ ಅವನೇ ನಾಸ್ತಿಕ" ಎಂದು ಅಭಿಪ್ರಾಯಪಡುತ್ತಾರೆ. ಕಠೋಪನಿಷತ್ತಿನ ನಚಿಕೇತನ ಉದಾಹರಣೆಯನ್ನು ನೀಡುತ್ತ, "ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಅಂತಹ ಶ್ರದ್ಧೆ ಬರಲಿ. ವೀರರಂತೆ, ಧೀರರಂತೆ ನಿಂತು, ಪ್ರಚಂಡ ಬುದ್ಧಿಶಕ್ತಿಯಿಂದ ದೇವರಂತೆ ನೀವು ಜಗಚ್ಚಾಲಕರಾಗಿ ಎಂದು ಆಶಿಸುತ್ತೇನೆ. ಉಪನಿಷತ್ತಿನಿಂದ ದೊರಕುವ ಶಕ್ತಿ ಇದು, ಶ್ರದ್ಧೆ ಇದು" ಎನ್ನುತ್ತಾರೆ. ಉಪನಿಷತ್ತುಗಳ ಅಧ್ಯಯನದಿಂದ ನಿರ್ಭಯತೆಯೂ ಕೂಡ ನಮ್ಮಲ್ಲಿ ಮನೆಮಾಡುವುದು. "ವಿಶ್ವದ ಸಾಹಿತ್ಯಗಳಲ್ಲೆಲ್ಲ ಇದೊಂದು ಸಾಹಿತ್ಯದಲ್ಲಿ ಮಾತ್ರ 'ಅಭೀಃ' 'ನಿರ್ಭಯತೆ' ಎಂಬ ಪದವನ್ನು ಮತ್ತೆ ಮತ್ತೆ ಕಾಣಬಹುದು" ಎನ್ನುತ್ತಾರೆ ಸ್ವಾಮೀಜಿ.

ಈ ಉಪನಿಷತ್ತುಗಳಿಂದ ವಿಶ್ವದ ಅಖಂಡತ್ವವೂ (unity) ಸಿದ್ಧಿಸುತ್ತದೆ ಎಂಬುದು ಸ್ವಾಮೀಜಿಯವರ ಅಭಿಪ್ರಾಯ. ವಿಶ್ವದ ಬೇರೆ ಬೇರೆ ದೇಶಗಳ ಜನರಲ್ಲಿ ಪರಸ್ಪರ ಇರುವ ಅಸಹನೆ ಹಾಗೂ ದ್ವೇಷಗಳಿಗೆ, ಇನ್ನೊಬ್ಬರ ಬಗೆಗೆ ಇರುವ ತಪ್ಪು ಕಲ್ಪನೆ ಅಥವಾ ಅಜ್ಞಾನವೇ ಕಾರಣ. ಕಾಲಕ್ರಮದಲ್ಲಿ ಸಾರಿಗೆ ಸಂಪರ್ಕ ಮತ್ತು ಸಂವಹನ ಮಾಧ್ಯಮದ ಕ್ಷೇತ್ರದಲ್ಲಿ ವಿಜ್ಞಾನದ ಅದ್ಭುತ ಆವಿಷ್ಕಾರದಿಂದಾಗಿ, ವಾಮನ ಮಾನವ ತ್ರಿವಿಕ್ರಮನಾಗಿ ಜಗತ್ತಿನ ಬೇರೆ ಬೇರೆ ಭಾಗಗಳಿಗೆ ಸಂಬಂಧವನ್ನು ಕಲ್ಪಿಸಿದನು. ಜನರು ಬೇರೆ ಬೇರೆ ದೇಶಗಳಿಗೆ ಪ್ರಯಾಣ ಮಾಡುತ್ತ, ಆಯಾ ಜನರನ್ನು ಅರ್ಥ ಮಾಡಿಕೊಳ್ಳುತ್ತ, ಪರಸ್ಪರರ ಬಗೆಗಿನ ತಪ್ಪು ಕಲ್ಪನೆ ಮಾಯವಾಗಿ ಪ್ರತಿಯೊಬ್ಬನೂ ಸಂಸ್ಕೃತಿಯ ಉತ್ತಮ ಅಂಶಗಳನ್ನು ಮೆಚ್ಚುವಂತಾಯಿತು, ತಾವೂ ಆ ಅಂಶಗಳನ್ನು ತಮ್ಮ ಸಂಸ್ಕೃತಿಗೆ ಅಳವಡಿಸಿಕೊಳ್ಳಲು ಸಹಾಯವಾಯಿತು. ನಮ್ಮ ಸಂಕುಚಿತ ದೃಷ್ಟಿಕೋನ ಮಾಯವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಲೋಚಿಸುತ್ತ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದರ ಮೂಲಕ ಇಡೀ ವಿಶ್ವವೇ ಒಂದು ಮನೆ ಎಂಬ ಭಾವನೆ ಇದೀಗ ಮನೆಮಾಡಿದೆ.

ಒಂದು ರಾಷ್ಟ್ರ ಬೆಳೆಯಬೇಕಾದರೆ ಇನ್ನೊಂದು ರಾಷ್ಟ್ರದ ಪ್ರಗತಿಯೂ ಅತ್ಯವಶ್ಯಕ ಎಂಬ ಸತ್ಯ ಕೆಲವು ವರ್ಷಗಳಿಂದ ನಾವು ವಿಶ್ವದಲ್ಲಿ ಅನುಭವಿಸುತ್ತಿರುವ ಆರ್ಥಿಕ ಹಿಂಜರಿತ (economic recession) ಸ್ಪಷ್ಟಪಡಿಸಿದೆ. ಹೇಗೆ ವಿಜ್ಞಾನವು ಜಗತ್ತೆಲ್ಲ ಒಂದು ರಾಶಿ, ಜಡವಸ್ತುವಿನ ಒಂದು ಮಹಾಸಾಗರವೆಂದೂ ಅದರಲ್ಲಿ ನಾವು, ಸೂರ್ಯ, ಚಂದ್ರರೆಲ್ಲ ವಿವಿಧ ಸುಳಿಗಳ ಹೆಸರು ಮಾತ್ರವೆಂದೂ ತೋರಿಸಿಕೊಟ್ಟಿದೆ. ಹಾಗೆಯೇ ಮಾನಸಿಕ ದೃಷ್ಟಿಯಿಂದಲೂ ಈ ಜಗತ್ತು ಒಂದು ಆಲೋಚನೆಗಳ ಮಹಾಸಾಗರ. ಇದರಲ್ಲಿ ಒಬ್ಬೊಬ್ಬನೂ ಒಂದೊಂದು ಅಲೆಯಿದ್ದಂತೆ. ಹಾಗೆಯೇ ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿದರೆ ಈ ಜಗತ್ತು ಬದಲಾಗದ, ಅಖಂಡೈಕ ರಸವಾದ ಆತ್ಮವೇ ಆಗಿದೆ. ಜಗತ್ತಿಗೆ ಅವಶ್ಯವಾಗಿರುವ ನೀತಿಯ ವಿವರಣೆ ಕೂಡ ಉಪನಿಷತ್ತಿನಲ್ಲಿಯೇ ಉತ್ತರ ಸಿಗುತ್ತದೆ ಎಂದು ಸ್ವಾಮೀಜಿ ಹೇಳುತ್ತಾರೆ.

ಉಪನಿಷತ್ತಿನಲ್ಲಿ ಆತ್ಮನನ್ನು 'ಪರಿಪೂರ್ಣ' ಎಂದು ಹೇಳಲಾಗಿದೆ. ಹೊರಗಿನಿಂದ ಅದೆಷ್ಟೇ ದುಷ್ಟವಾಗಿರಲಿ, ಪ್ರತಿಯೊಂದು ಜೀವಿಯಲ್ಲಿಯೂ ದೈವತ್ವವಿದೆ ಎನ್ನುತ್ತದೆ, ಉಪನಿಷತ್ತು. ಜೀವಿಯ ಮೇಲ್ಭಾಗದಲ್ಲಿ ಈ ದುಷ್ಟತನ, ವಂಚನೆಗಳು ತೋರುತ್ತಿದ್ದರೂ, ಅದರ ನೈಜಸ್ವಭಾವ ದಿವ್ಯತೆಯೇ. ಇದರ ಆಧಾರದ ಮೇಲೆಯೇ ಸಮಾಜದಲ್ಲಿ ದುಷ್ಟರನ್ನು ತಿದ್ದುವ ಸುಧಾರಣಾಲಯಗಳು (reformatories) ಕಾರ್ಯ ನಿರ್ವಹಿಸುತ್ತಿರುವುದು. ಶಾಲೆಯಲ್ಲಿ ಮಕ್ಕಳಿಗೆ ಬೋಧಿಸುವಾಗಲೂ 'ವಿದ್ಯಾರ್ಥಿಗಳಲ್ಲಿ ಅದಾಗಲೇ ಇರುವಂತಹ ಪರಿಪೂರ್ಣತೆಯ ಅಭಿವ್ಯಕ್ತಿ ಮಾತ್ರ ಶಿಕ್ಷಣದ ಗುರಿ' ಎಂಬ ತತ್ತ್ವದ ಆಧಾರದ ಮೇಲೆ ಶಿಕ್ಷಕರು ಕಾರ್ಯ ನಿರ್ವಹಿಸಿದಲ್ಲಿ, ತಮ್ಮ ಕ್ಷೇತ್ರದಲ್ಲಿ ಯಶಸ್ವಿಗಳಾಗಲು ಸಾಧ್ಯವೆನ್ನುತ್ತಾರೆ ಸ್ವಾಮೀಜಿ. ಅಲ್ಲಿ ನಡೆಯಬೇಕಾಗಿರುವುದು ಋಣಾತ್ಮಕವಾದ ಕೆಲಸವೇ ಹೊರತು ಬೇರೇನಲ್ಲ. ವಿದ್ಯಾರ್ಥಿ ಹಾಗೂ ಜ್ಞಾನದ ನಡುವೆ ಇರುವ ಅಜ್ಞಾನದ ಪರದೆಯನ್ನು ಸರಿಸುವುದಷ್ಟೇ ಗುರುವಿನ ಕೆಲಸವಾಗಬೇಕು. ಶಿಕ್ಷಕರು ತಮ್ಮ ಬೋಧನಾ ವಿಧಾನದಲ್ಲಿ ಈ ತತ್ತ್ವವನ್ನು ಹಿನ್ನೆಲೆಯಲ್ಲಿಟ್ಟುಕೊಂಡರೆ, ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಪರಿಪೂರ್ಣವಾಗಿಸಬಹುದು.

ಉಪನಿಷತ್ತಿನ ಬೋಧನಾ ಪ್ರಣಾಲಿ ಅಪೂರ್ವವಾದುದು. ಅಲ್ಲಿ ವಿವಿಧ ಶೈಲಿಯ ಬೋಧನೆಗಳು ನಮಗೆ ದೊರಕುತ್ತವೆ. ವಿವಿಧತೆಯಲ್ಲಿ ಏಕತೆಯನ್ನು ತೋರಿಸಿಕೊಡುವುದು ಸುಲಭದ ಮಾತಲ್ಲ. ಅದು ಅನುಭವದ ಮಾತು. ಅದನ್ನು ಅರುಂಧತಿ ನ್ಯಾಯದಂತೆ ಉಪನಿಷತ್ತುಗಳು ನಮಗೆ ತೋರಿಸಿಕೊಡುತ್ತವೆ